

# ಬಾಲಕನ ಸಸ್ಯ ಪ್ರೇಮ

■ ಭೋಜರಾಜ ಸೊಪ್ಪಿಮಠ

ಕಲೆ: ಸಂತೋಷ್ ಸಸಿಹಿತ್ಲು

ವೀರೇಶ ಶಾಲೆಯಿಂದ ಮನೆಗೆ ಬಂದ. ಅವನಿಗೆ ತುಂಬಾ ಹಸಿವಾಗಿತ್ತು. ಮನೆಯಲ್ಲಿ ತಿನ್ನಲು ಏನಾದರೂ ಸಿಗಬಹುದೇನೋ ಎಂದು ಹುಡುಕಾಡಿದ. ಏನೂ ಸಿಗಲಿಲ್ಲ. ಕೆಲವು ಚಿಕ್ಕು ಹಣ್ಣುಗಳು ಕಂಡವಾದರೂ ತಾತನಿಗೆ ಮೈಯಲ್ಲಿ ಹುಷಾರಿಲ್ಲದ ಕಾರಣ ಅವುಗಳನ್ನು ಯಾರೂ ತಿನ್ನಬೇಡಿರೆಂದು ಬೆಳಗ್ಗೆಯೇ ಮನೆಯಲ್ಲಿನ ಎಲ್ಲರೂ ತಾಕೀತು ಮಾಡಿದ್ದರಿಂದಾಗಿ ಅವುಗಳನ್ನು ತಿನ್ನುವಂತೆ ಇರಲಿಲ್ಲ. ಆದರೆ ಆಗ ತನಗಾಗುತ್ತಿರುವ ಹಸಿವನ್ನು ತಡೆದುಕೊಳ್ಳಲಾಗದೆ ಪದೇ ಪದೇ ಅವನ ಮನಸು ಚಿಕ್ಕು ಹಣ್ಣುಗಳತ್ತಲೇ ಹೋಗುತಿತ್ತು.

ಸುತ್ತಲೂ ಒಮ್ಮೆ ನೋಡಿದ. ಮನೆಯ ಹೊರಗೆ ಎಲ್ಲರೂ ಯಾವುದೋ ಕೆಲಸದಲ್ಲಿದ್ದರು. ಪಕ್ಕದ ಕೋಣೆಯಲ್ಲಿ ಅನಾರೋಗ್ಯ ತಾತ ಮಲಗಿ ನಿದ್ದೆ ಮಾಡುತಿದ್ದರು. ತನ್ನನ್ನು ಯಾರೂ ಗಮನಿಸುತ್ತಿಲ್ಲ ಎಂಬುದನ್ನು ಖಚಿತಪಡಿಸಿಕೊಂಡು ಬುಟ್ಟಿಯಲ್ಲಿದ್ದ ಒಂದು ಚಿಕ್ಕು ಹಣ್ಣನ್ನು ತೆಗೆದು ತೊಳೆದ. ಯಾರಾದರೂ ಬರುವ ಮೊದಲೇ ತಿಂದು ಮುಗಿಸಬೇಕೆಂದು ತಿನ್ನತೊಡಗಿದ. ಅದರಲ್ಲಿ ಬರುವ ಬೀಜಗಳನ್ನು ಹಾಗೆಯೇ ಕೈಯಲ್ಲಿ ಹಿಡಿದುಕೊಂಡ. ಬಿಸಾಡಿದರೆ ತಿಂದಿರುವುದು ಗೊತ್ತಾಗುತ್ತದೆ ಎಂದುಕೊಂಡು ಮನೆಯ ಹಿತ್ತಲ ಬಾಗಿಲಿನಿಂದ ಹೊರಗೆ ಬಂದು ಒಂದು ಮೂಲೆಯಲ್ಲಿ ಸ್ವಲ್ಪ ತಗ್ಗನ್ನು ತೆಗೆದು ಆ ಬೀಜಗಳನ್ನು ಮುಚ್ಚಿದ.

ಬುಟ್ಟಿಯಲ್ಲಿನ ಎರಡು ಹಣ್ಣುಗಳು ಕಡಿಮೆ ಆಗಿರುವುದು ಯಾರಾದರೂ ಗಮನಕ್ಕೆ ಬರಬಹುದೇನೋ ಎಂಬ ಆತಂಕ ಅವನಲ್ಲಿ ಇತ್ತು. ಆದರೆ ಯಾರೂ ಕೇಳಲಿಲ್ಲ. ಮುಚ್ಚಿದ ಬೀಜಗಳನ್ನು ಯಾರಾದರೂ ಕೆದಕಿ ನೋಡಿದ್ದಾರೇನೋ ಎಂದು ತಾನು ಹುಗಿದ ಜಾಗದತ್ತ ಗಮನಿಸುತಿದ್ದ.

ಒಂದು ವಾರದ ನಂತರದಲ್ಲಿ ತಾನು ಮುಚ್ಚಿದ ಬೀಜದ ಜಾಗದಿಂದ ಮೊಳಕೆಯೊಡೆದ ಸಸ್ಯದ ಕುಡಿಯೊಂದು ಕಾಣಿಸಿತು. ಅವನಿಗೆ ಖುಷಿಯಾಯಿತು. ಅದರ ಸುತ್ತಲೂ ಮಣ್ಣಿನಿಂದ ಮಡಿ ಮಾಡಿ ನೀರು ಹಾಕತೊಡಗಿದ. ಸಾವಯವ ಗೊಬ್ಬರವನ್ನು ಹಾಕಿದ. ನೋಡುತಿದ್ದಂತೆ ಅದು ಬೆಳೆಯತೊಡಗಿತು. ಅವನು ದಿನಾಲೂ ಆ ಗಿಡದ ಆರೈಕೆ ಮಾಡುವುದನ್ನು ಕಂಡ ಮನೆಯವರು ಅವನ ಚಟುವಟಿಕೆಗೆ ಪ್ರೋತ್ಸಾಹ ನೀಡಿದರು. ಬಿಡುವಿದ್ದಾಗ ಅದಕ್ಕೆ ಸುತ್ತ ಮುಳ್ಳಿನ ಬೇಲಿ ಮಾಡಿದ.

ಒಂದು ವರ್ಷ ಕಳೆದಿರಬಹುದು. ಅದು ಚಿಕ್ಕ ಚಿಕ್ಕ ಹೂವುಗಳನ್ನು ಬಿಡಲು ಪ್ರಾರಂಭಿಸಿತು. ಮನೆಯ ಹಿರಿಯರನ್ನು ಕೇಳಿ ಅದಕ್ಕೆ ಮಾಡಬೇಕಾದ ಆರೈಕೆಯ ಕುರಿತಾಗಿ ಮಾಹಿತಿ ಪಡೆದುಕೊಂಡ. ಅದರಂತೆ ಬೆಳೆಸತೊಡಗಿದ. ಮತ್ತೆ ಆರು ತಿಂಗಳು ಕಳೆಯುತ್ತಲೇ ಹಣ್ಣು ಬಿಡಲು ಪ್ರಾರಂಭಿಸಿತು.

ಮನೆಯ ಎಲ್ಲರೂ ಅವನ ಜಾಣ್ಮೆಯನ್ನು ಮೆಚ್ಚಿಕೊಂಡರು. ಸಂತೋಷದಿಂದ ಎಲ್ಲರೂ ಹಂಚಿಕೊಂಡು ತಿಂದರು. ಕೆಲವು ಹಣ್ಣುಗಳನ್ನು ತನ್ನ ಶಿಕ್ಷಕರಿಗೂ ಒಯ್ದು ಕೊಟ್ಟ. ಎಲ್ಲರೂ ಅವನ ಗುಣಗಾನ ಮಾಡಿದರು. ಅದರಿಂದ ಉತ್ತೇಜನಗೊಂಡು ಮತ್ತೆ ಕೆಲವು ಗಿಡಗಳನ್ನು ನೆಡಲು ಪ್ರಾರಂಭಿಸಿದ. ಆದರೆ ತಾನು ಕದ್ದು ತಿಂದ ಹಣ್ಣಿನ ಬೀಜಗಳಿಂದ ಈ ಗಿಡ ಬೆಳೆಯಿತು ಎಂದು ಯಾರ ಮುಂದೆಯೂ ಸತ್ಯ ಬಾಯಿ ಬಿಡಲಿಲ್ಲ. ■